ಘನತೆವೆತ್ತ ರಾಜ್ಯಪಾಲರು ಮಧ್ಯಾಹ್ನ 12.10 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸಿದರು. ಘನತೆವೆತ್ತ ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಸಂಸದೀಯ ವ್ಯವಹಾಗಳ ಸಚಿವರು ಮತ್ತು ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಗಳು ಸ್ವಾಗತಿಸಿ, ಮಹಾದ್ವಾರದ ಬಳಿ ಕರೆದುಕೊಂಡು ಬಂದರು. ಅಲ್ಲಿ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಶ್ರೀ ಪಿ.ಓಂಪ್ರಕಾಶ್
ವಿಧಾನಸಭೆಯ ಕಾರ್ಯದರ್ಶಿ

ಶ್ರೀ ವಿ.ಶ್ರೀಶ್
ವಿಧಾನ ಪರಿಷತ್ತಿನ ಕಾರ್ಯದರ್ಶಿ

ಶ್ರೀ ಕೆ.ಜಿ.ಬೋಪಯ್ಯ
ಮಾನ್ಯ ಸಭಾಧ್ಯಕ್ಷರು

ಶ್ರೀ ಡಿ.ಹೆಚ್.ಶಂಕರಮೂರ್ತಿ
ಮಾನ್ಯ ಸಭಾಪತಿಯವರು

ಶ್ರೀ ಹೆಚ್.ಆರ್.ಭಾರದ್ವಾಜ್
ಘನತೆವೆತ್ತ ರಾಜ್ಯಪಾಲರು

ಶ್ರೀ ಡಿ.ವಿ.ಸದಾನಂದಗೌಡ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಎಸ್.ಸುರೇಶ್‌ಕುಮಾರ್
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಈ ಮೆರವಣಿಗೆಯು ವಿಧಾನಸಭೆಯ ಸಭಾಂಗಣದ ಕಡೆಗೆ ಆಗಮಿಸಿತು. ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತುಕೊಂಡಿದ್ದರು. ಮೆರವಣಿಗೆಯು ವೇದಿಕೆಯ ಕಡೆ ಮುಂದುವರಿಯಿತು. ಸಭಾ ಭವನದ ವೇದಿಕೆಯ ಮುಂದೆ ಬಂದ

ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲಿರುವ ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ವೇದಿಕೆಯ ಮೇಲೆ ಮಾನ್ಯ ಸಭಾಧ್ಯಕ್ಷರು ಘನತೆವೆತ್ತ ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನಗಳಲ್ಲಿ ಕುಳಿತುಕೊಂಡರು.

1. ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಹೆಚ್.ಆರ್.ಭಾರದ್ವಾಜ್‌ರವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಜಂಟಿ ಅಧಿವೇಶವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ದಿನಾಂಕ: 30.01.2012 ರಂದು ಮಧ್ಯಾಹ್ನ: 12.15 ಗಂಟೆಗೆ ಮಾಡಿದ ಭಾಷಣ.

HIS EXCELLENCY THE GOVERNOR: Honourable Chairman, Honourable Speaker and Honourable members…..,

(ಗೊಂದಲ)

(ಶ್ರೀ ಗೋಪಾಕೃಷ್ಣ ಬೇಳೂರುರವರು ಭಿತ್ತಿ ಪತ್ರವನ್ನು ಪ್ರದರ್ಶಿಸುತ್ತಿದ್ದರು)

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಳವಳ್ಳಿ): ಘನತೆವೆತ್ತ ರಾಜ್ಯಪಾಲರೆ,... ಸದನದ ಘನತೆಯನ್ನು ಎತ್ತಿಹಿಡಿದಿದ್ದಾರೆ.....

(ಗೊಂದಲ)